ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೨

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೊಂಭತ್ತನೆಯ ಅಧಿವೇಶನ

## ಮಂಗಳವಾರ, ದಿನಾಂಕ : ೧೮ನೇ ಆಗಸ್ಟ್, ೨೦೨೬

---

### ಸಮೂಹ – II

೧. ವಸತಿ ಸಚಿವರು
೨. ಕೃಷಿ ಸಚಿವರು
೩. ಸಕ್ಕರೆ ಮತ್ತು ಜವಳಿ ಸಚಿವರು
೪. ಸಹಕಾರ ಸಚಿವರು
೫. ಪೌರಾಡಳಿತ ಸಚಿವರು
೬. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು
೭. ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
೮. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

---

## ಬ್ರಹ್ಮಾವರ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬ (೨೦೬) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಬ್ರಹ್ಮಾವರ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಮುಂದಿನ ಕ್ರಮ ಕೈಗೊಳ್ಳುವಂತೆ ೨೦೧೧ರಲ್ಲಿ ಕೃಷಿ ಇಲಾಖೆಗೆ ಸೂಚಿಸಲಾಗಿದ್ದೂ ಈವರೆಗೆ ಅನುಷ್ಠಾನವಾಗಿಲ್ಲದೆ ಇರಲು ಕಾರಣವೇನು ;

(ಆ) ಬ್ರಹ್ಮಾವರ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಉದ್ದೇಶಿಸಿರುವ ಪ್ರದೇಶದಲ್ಲಿ ಸುಮಾರು ೧,೨೨,೧೩.೨ ಹೆಕ್ಟೇರ್ ಕೃಷಿ ಭೂಮಿ ಹೊಂದಿದ್ದರೂ ಹಾಗೂ ದಿನಾಂಕ: ೦೬/೦೪/೨೦೨೪ರಂದು ತಜ್ಞರ ಸಮಿತಿಯು ಶಿಫಾರಸ್ಸು ಮಾಡಿದ್ದರೂ ಈವರೆಗೆ ಸ್ಥಾಪನೆಯಾಗದಿರಲು ಕಾರಣವೇನು ;

(ಇ) ಕರ್ನಾಟಕ ಸರ್ಕಾರ ೨೦೧೧ರಲ್ಲಿ ಬ್ರಹ್ಮಾವರ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಕೃಷಿ ಇಲಾಖೆಗೆ ನೀಡಿದ ಸೂಚನೆಯಂತೆ ಇಲಾಖೆಯು ಇಂದಿನವರೆಗೆ ಕೈಗೊಂಡಿರುವ ಅನುಸರಣ ಕ್ರಮಗಳೇನು ; ಯಾವ್ಯಾವ ವಿಷಯಗಳಿಗೆ ಅನುಮೋದನೆ ನೀಡಿ ಅನುದಾನ ಮಂಜೂರು ಮಾಡಿದೆ ;

(ಈ) ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದೆಯೇ; ಈ ಸಂಬಂಧ ಕೈಗೊಂಡಿರುವ ಇತರೆ ಕ್ರಮಗಳೇನು ; ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯವು ೫ ಕೋಟಿ ರೂಪಾಯಿ ಅನುದಾನ ನೀಡಿದ್ದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಬಹುದೆಂದು ನೀಡಿರುವ ವರದಿಯ ಅನುಷ್ಠಾನದ ಕುರಿತು ಸರ್ಕಾರದಲ್ಲಿ ಯಾವ ಹಂತದಲ್ಲಿದೆ; ೫ ಕೋಟಿ ಅನುದಾನ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಉ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯ ಸನಿಹದಲ್ಲಿ ಎಲ್ಲಿಯೂ ಕೃಷಿ ಮಹಾವಿದ್ಯಾಲಯ ಇಲ್ಲದಿದ್ದ ಕಾರಣ ಸದರಿ ಭಾಗದ ರೈತರ ಬೇಡಿಕೆಯಿರುವ ಹಿನ್ನೆಲೆಯಲ್ಲಿ ೨೦೨೬–೨೭ನೇ ಶೈಕ್ಷಣಿಕ ವರ್ಷದಿಂದ ಬ್ರಹ್ಮಾವರ ಕೃಷಿ ಮಹಾವಿದ್ಯಾಲಯ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಿಸಲು ಯಾವಾಗ ಆದೇಶ ಹೊರಡಿಸಲಾಗುವುದು ?

## ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೧೭ (೨೨೦) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಸಹಕಾರ ಸಂಘಗಳು (ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಗರ ಸೌಹಾರ್ದ/ಪಟ್ಟಣ ಸಹಕಾರ ಸಂಘಗಳು ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗಳು ಸೇರಿದಂತೆ) ಕಾರ್ಯನಿರ್ವಹಿಸುತ್ತಿವೆ ; (ವಿಭಾಗವಾರು ಮತ್ತು ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ (ಡಿ.ಸಿ.ಸಿ) ಬ್ಯಾಂಕ್ ಸೇರಿದಂತೆ ರಾಜ್ಯದ ವಿವಿಧ ಜಿಲ್ಲಾ ಸಹಕಾರ ಬ್ಯಾಂಕ್‌ಗಳು ಮತ್ತು ಸಂಘಗಳಿಂದ ಎಷ್ಟು ಜನರಿಗೆ ಮತ್ತು ಎಷ್ಟು ಮೊತ್ತದ ಸಾಲವನ್ನು ವಿತರಿಸಲಾಗಿದೆ ; (ವರ್ಷವಾರು ವಿವರ ನೀಡುವುದು)

(ಇ) ವಿತರಿಸಲಾದ ಸಾಲದಲ್ಲಿ ಸಾಮಾನ್ಯ ವರ್ಗ, ಹಿಂದುಳಿದ ವರ್ಗಗಳು (OBC) ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ (SC/ST) ಸೇರಿದ ಎಷ್ಟು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ ; ಇವರಿಗೆ ನೀಡಲಾದ ಒಟ್ಟು ಸಾಲದ ಮೊತ್ತವೆಷ್ಟು ; (ವರ್ಗವಾರು ಹಾಗೂ ವರ್ಷವಾರು ವಿವರ ಒದಗಿಸುವುದು)

(ಈ) ಪ್ರಸ್ತುತ ವಿವಿಧ ಸಹಕಾರ ಸಂಘಗಳು ಹಾಗೂ ಜಿಲ್ಲಾ ಬ್ಯಾಂಕ್‌ಗಳು ಸಾಮಾನ್ಯ ವರ್ಗ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದವರಿಂದ ವಸೂಲಾಗದೇ ಬಾಕಿ ಇರುವ (Outstanding/NPAs) ಸಾಲದ ಮೊತ್ತವೆಷ್ಟು ? (ವರ್ಗವಾರು ಸಂಪೂರ್ಣ ವಿವರ ನೀಡುವುದು)

## ಆಸ್ತಿ ಅತಿಕ್ರಮಣದ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೮ (೨೪೨) ಪೌರಾಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಆಸ್ತಿಯನ್ನು ಅತಿಕ್ರಮಣ ಮಾಡುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಮಾಹಿತಿ ನೀಡುವುದು)

(ಆ) ಇದುವರೆಗೂ ರಾಜ್ಯದಲ್ಲಿ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಎಷ್ಟು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ; ಬಾಕಿ ಇರುವ ಪ್ರಕರಣಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸದರಿ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಅತಿಕ್ರಮವನ್ನು ತಡೆಗಟ್ಟಲು ಹಾಗೂ ಜಾಹೀರಾತು ಹಾವಳಿಯನ್ನು ನಿಯಂತ್ರಣ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ನಿರ್ಮಿಸಲಾದ ಕೃಷಿ ಹೊಂಡಗಳ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯ (೨೭೧) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ನಿರ್ಮಾಣ ಮಾಡಲಾದ ಕೃಷಿ ಹೊಂಡಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕೃಷಿ ಹೊಂಡ ನಿರ್ಮಾಣಕ್ಕೆ ಸರ್ಕಾರದಿಂದ ನೀಡಲಾಗುವ ಸಹಾಯಧನ (Subsidy) ಪ್ರಮಾಣ ಎಷ್ಟು ; ಸಾಮಾನ್ಯ ವರ್ಗ, ಎಸ್ಸಿ/ಎಸ್ಟಿ ಹಾಗೂ ಇತರ ವರ್ಗಗಳಿಗಾಗಿ ಪ್ರತ್ಯೇಕ ಸಹಾಯಧನ ದರ ಎಷ್ಟು ; (ವಿವರ ನೀಡುವುದು)

(ಇ) ಈ ಯೋಜನೆಯಡಿ ಲಾಭ ಪಡೆದಿರುವ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಹಾಗೂ ವರ್ಗವಾರು ವಿವರ ನೀಡುವುದು) ;

(ಈ) ಇನ್ನೂ ಅನುದಾನ ಬಿಡುಗಡೆಗಾಗಿ ಬಾಕಿ ಇರುವ ಅರ್ಜಿಗಳ ಪ್ರಕರಣಗಳ ಸಂಖ್ಯೆ ಎಷ್ಟು ; ಬಾಕಿ ಮೊತ್ತದ ಒಟ್ಟು ಪ್ರಮಾಣ ಎಷ್ಟು ; ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿನ ಅಕ್ರಮಗಳ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೨೦ (೨೨೭) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತರು ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಉಪಯೋಗಕ್ಕೆ ಮಂಜೂರು ಮಾಡಿದ್ದ ಜಮೀನನ್ನು ಶಾಂತಿನಗರ ಗೃಹ ನಿರ್ಮಾಣ ಸಂಘಕ್ಕೆ ಕಾನೂನು ಬಾಹಿರವಾಗಿ ನೋಂದಣಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಜಮೀನನ್ನು ಸರ್ಕಾರದಿಂದ ಹಿಂಪಡೆಯಲಾಗಿದೆಯೇ ; ಹಿಂಪಡೆಯದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಹಿಂಪಡೆಯಲಾಗುವುದು ;

(ಆ) ಲ್ಯಾಂಗ್‌ಫೋರ್ಡ್ ರಸ್ತೆ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದ ಅಕ್ರಮಗಳ ಸ್ವರೂಪಗಳಾವುವು ; ಇದಕ್ಕೆ ಸಹಾಯ ನೀಡಿದ ಅಧಿಕಾರಿಗಳ್ಯಾರು ಅವರ ಮೇಲೆ ಕೈಗೊಂಡ ಕ್ರಮಗಳೇನು ;

(ಇ) ಸದರಿ ಸಂಘದಿಂದ ಒಟ್ಟು ಎಷ್ಟು ನಿವೇಶನಗಳನ್ನು ರಚಿಸಲಾಗಿತ್ತು ಎಷ್ಟು ನಿವೇಶನಗಳನ್ನು ಹಂಚಲಾಗಿದೆ ಹಾಗೂ ಎಷ್ಟು ನಿವೇಶನಗಳು ಹಂಚಿಕೆಗೆ ಬಾಕಿ ಇದೆ ? (ನಿವೇಶನಗಳ ಹಂಚಿಕೆ ಪಟ್ಟಿಯ ಪ್ರತಿಯನ್ನು ನೀಡುವುದು)

## ರಾಜ್ಯದ ಗೋ ಶಾಲೆಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೨೧ (೨೩೩) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗೋಶಾಲೆಗಳ ಸಂಖ್ಯೆ ಎಷ್ಟು; ಅವುಗಳ ಸಾಮರ್ಥ್ಯ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ಗೋಶಾಲೆಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಅನುದಾನ ಮತ್ತು ಸೌಲಭ್ಯಗಳೇನು ; ಗೋಶಾಲೆಗಳ ನಿರ್ವಹಣೆಗೆ ಮಂಜೂರಾದ, ಭರ್ತಿ ಮತ್ತು ಖಾಲಿ ಇರುವ ಹುದ್ದೆಗಳು ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ವಶಪಡಿಸಿಕೊಂಡ ಅನಾಥ ಗೋವುಗಳು ಹಾಗೂ ಸಂರಕ್ಷಣೆ ಅಗತ್ಯವಿರುವ ಜಾನುವಾರುಗಳ ಪಾಲನೆಗಾಗಿ ಹೊಸ ಗೋಶಾಲೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಲು ಸರ್ಕಾರದ ಬಳಿ ಯಾವುದೇ ಯೋಜನೆ ಇದೆಯೇ ; ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಗೋ ಶಾಲೆಗಳು ಎಷ್ಟು ;

(ಈ) ಗೋಶಾಲೆಗಳಿಗೆ ಭೂಮಿ, ನೀರು, ವಿದ್ಯುತ್, ಪಶು ಆಹಾರ, ಪಶುವೈದ್ಯಕೀಯ ಸೇವೆ, ಸಿಬ್ಬಂದಿ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ವಿಶೇಷ ಯೋಜನೆ ಅಥವಾ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಪರಿಶೀಲಿಸುತ್ತಿದೆಯೇ ; ಇದ್ದಲ್ಲಿ, ಅದರ ವಿವರವೇನು ;

(ಉ) ರಾಜ್ಯದಲ್ಲಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯಿದೆ ಜಾರಿಯಲ್ಲಿದ್ದರೂ ಅಕ್ರಮ ಜಾನುವಾರು ಸಾಗಾಟ, ಗೋ ಕಳ್ಳತನ ಹಾಗೂ ಗೋ ಹತ್ಯೆಗೆ ಸಂಬಂಧಿಸಿದ ಹಲವಾರು ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಲ್ಲಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು ;

(ಊ) ಪೊಲೀಸ್ ಇಲಾಖೆ ಪಶುಸಂಗೋಪನಾ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳ ನಡುವೆ ಸಮನ್ವಯ ವ್ಯವಸ್ಥೆ ಜಾರಿಯಲ್ಲಿದೆಯೇ ?

## ರಾಜ್ಯದ ರೈತರಿಗೆ ನೀಡಿದ ಕೃಷಿ ಸಾಲ ಮನ್ನಾ ಮಾಡುವ ಕುರಿತು

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨ (೨೭೫) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), ಡಿಸಿಸಿ ಬ್ಯಾಂಕ್‌ಗಳು ಹಾಗೂ ವಿವಿಧ ಸಹಕಾರ ಸಂಸ್ಥೆಗಳ ಮೂಲಕ ರಾಜ್ಯದ ರೈತರಿಗೆ ವಿತರಿಸಲಾದ ಒಟ್ಟು ಸಾಲದ ಮೊತ್ತವೆಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಇದರಲ್ಲಿ ಸಣ್ಣ ರೈತರಿಗೆ (ರೂ. ೧ ಲಕ್ಷದವರೆಗೆ ಸಾಲ ಪಡೆದವರಿಗೆ) ವಿವಿಧ ಕೃಷಿ ಚಟುವಟಿಕೆಗಳಿಗಾಗಿ ವಿತರಿಸಲಾದ ಸಾಲದ ಮೊತ್ತವೆಷ್ಟು ; (ವರ್ಷವಾರು ವಿವರ ನೀಡುವುದು)

(ಇ) ಪ್ರಸ್ತುತ ರಾಜ್ಯದಲ್ಲಿರುವ ಬರಗಾಲದ ಹಿನ್ನೆಲೆಯಲ್ಲಿ, ಸಹಕಾರ ಇಲಾಖೆ/ ಸಂಸ್ಥೆಗಳ ಮೂಲಕ ರೈತರು ಪಡೆದಿರುವ ಕೃಷಿ ಸಾಲವನ್ನು ಮನ್ನಾ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ರಾಜ್ಯದಲ್ಲಿ ಸಹಕಾರ ಇಲಾಖೆಯ ಮೂಲಕ ರೈತರಿಗೆ ನೀಡಿರುವ ಕೃಷಿ ಸಾಲದ ಒಟ್ಟು ಮೊತ್ತವೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ಬೆಂಗಳೂರಿನಲ್ಲಿ ಇರುವ ಒಟ್ಟು ಗೃಹ ನಿರ್ಮಾಣ ಸಂಘಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೨೩ (೨೧೭) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನಲ್ಲಿ ಇರುವ ಒಟ್ಟು ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು ; (ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

(ಆ) ಈ ಸಹಕಾರ ಸಂಘಗಳು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿವೆ ; (ವಿವರ ನೀಡುವುದು)

(ಇ) ಈ ಸಹಕಾರ ಸಂಘಗಳು ನಿವೇಶನ ಹಂಚಿಕೆ ಸಲುವಾಗಿ ಖರೀದಿಸಿದ ಭೂ ವಿಸ್ತೀರ್ಣವೆಷ್ಟು ; ಇದಕ್ಕೆ ಹಾಕಿದ ಬಂಡವಾಳವೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಈ) ಈ ಸಹಕಾರ ಸಂಘಗಳು ಎಷ್ಟು ನಿವೇಶನದಾರರುಗಳಿಗೆ ನಿವೇಶನ ಹಂಚಿಕೆ ಮಾಡಿವೆ ; (ಹೆಸರು, ವಿಳಾಸ, ನಿವೇಶನದ ಅಳತೆಯೊಂದಿಗೆ ವಿವರ ನೀಡುವುದು)

(ಉ) ಇವರುಗಳು ನಿವೇಶನದಾರರಿಗೆ ನಿವೇಶನ ನೀಡದೆ ವರ್ಷಾನುಗಟ್ಟಲೆಯಿಂದ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಊ) ಈ ಸಹಕಾರ ಸಂಘಗಳು ತನ್ನ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡದೇ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡಿರುವ ಬಗ್ಗೆ ರೇರಾ ಕಾಯ್ದೆಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆಯೇ ?

## ಕರ್ನಾಟಕದಲ್ಲಿ ರೈತರು ಪಡೆದಿರುವ ಕೃಷಿ ಸಾಲದ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೨೪ (೨೪೭) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕೃಷಿಕರು ಪಡೆದಿರುವ ಕೃಷಿ (ಬೆಳೆ) ಸಾಲದ ಒಟ್ಟು ಮೊತ್ತ ಎಷ್ಟು;

(ಆ) ಯಾವ ಜಿಲ್ಲೆಯ ರೈತರು ಅತಿ ಹೆಚ್ಚು ಹಾಗೂ ಅತೀ ಕಡಿಮೆ ಸಾಲ ಪಡೆದುಕೊಂಡಿದ್ದಾರೆ ; (ಜಿಲ್ಲಾವಾರು ರೈತರ ಸಂಖ್ಯೆ ಮತ್ತು ಪಡೆದ ಸಾಲದ ಒಟ್ಟು ಮೊತ್ತದ ವಿವರ ನೀಡುವುದು)

(ಇ) ರಾಜ್ಯದಲ್ಲಿ ಬೆಳೆ ಸಾಲ ಮತ್ತು ಅವಧಿ ಸಾಲ (ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ) ಪಡೆದಿರುವ ರೈತರ ಸಂಖ್ಯೆ ಮತ್ತು ಒಟ್ಟು ಮೊತ್ತ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಈ) ಸಾಲ ವಸೂಲಾತಿಯಲ್ಲಿ ಇಳಿಮುಖವಾಗುತ್ತಿರುವುದು ನಿಜವೇ ; ಆಗಿದ್ದಲ್ಲಿ, ಕಾರಣಗಳೇನು ; ಇದರ ಪ್ರಮಾಣ ಎಷ್ಟಿದೆ ; (ಶೇಕಡವಾರು ಮಾಹಿತಿಯೊಂದಿಗೆ ಸಂಪೂರ್ಣ ವಿವರ ನೀಡುವುದು)

(ಉ) ಕೃಷಿ–ಬೆಳೆ ಸಾಲಕ್ಕೆ ಇರುವ ಬಡ್ಡಿ ಮತ್ತು ಸಹಾಯಧನದ ಪ್ರಮಾಣ ಎಷ್ಟು? (ವಿವರ ನೀಡುವುದು)

## ನಿವೃತ್ತಿಯಿಂದ ತೆರವಾಗಿರುವ ಹುದ್ದೆಗಳ ನೇಮಕಾತಿ ಕುರಿತು

**ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ) –**

೨೫ (೨೧೬) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇದಕ್ಕೆ ಮಂಜೂರಾದ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳೆಷ್ಟು ; ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳೆಷ್ಟು ; (ವೃಂದವಾರು ಮಾಹಿತಿ ಒದಗಿಸುವುದು)

(ಆ) ೨೦೨೬–೨೭ನೇ ಸಾಲಿನಲ್ಲಿ ಖಾಲಿ ಇರುವ ಶಿಕ್ಷಕ ಶಿಕ್ಷಕೇತರ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೇ ; (ಹಾಗಿದ್ದಲ್ಲಿ ಮಾಹಿತಿ ಒದಗಿಸುವುದು)

(ಇ) ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ (ಗೃಹ ವಿಜ್ಞಾನ ಕಾಲೇಜು) "ಸಮುದಾಯ ವಿಜ್ಞಾನ ಕಾಲೇಜು" ಕಟ್ಟಡ ಸಂಪೂರ್ಣ ಶಿಥಿಲಗೊಂಡು ಶೈಕ್ಷಣಿಕ ಹಾಗೂ ಸಂಶೋಧನೆ ಚಟುವಟಿಕೆಗಳಿಗೆ ಅಡೆತಡೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಪ್ರತ್ಯೇಕವಾದ ನೂತನ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಆ ಕುರಿತು ನೀಲಿ ನಕ್ಷೆ ಹಾಗೂ ಅಂದಾಜು ಪತ್ರ ಸಿದ್ಧಪಡಿಸುವ ಕಾರ್ಯ ಪ್ರಾರಂಭ ಮಾಡಿದೆಯೇ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ರೇಷ್ಮೆ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೨೬ (೧೭೬) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರೇಷ್ಮೆ ಇಲಾಖೆಗೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು ಮಾಹಿತಿ ಒದಗಿಸುವುದು)

(ಆ) ಅತಿ ಹೆಚ್ಚು ರೇಷ್ಮೆ ಬೆಳೆಯುವ ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ತುಮಕೂರು ಜಿಲ್ಲೆ ಸೇರಿದಂತೆ ಈ ಜಿಲ್ಲೆಗಳ ಯಾವ ಯಾವ ಕಛೇರಿಗಳಲ್ಲಿ

ಅಧಿಕಾರಿ/ಸಿಬ್ಬಂದಿ/ತಾಂತ್ರಿಕ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿ ಒದಗಿಸುವುದು ; ಹಾಗೆಯೇ ಈ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಇ) ರಾಜ್ಯದ ಮೈಸೂರು ರೇಷ್ಮೆಗೆ ವಿಶ್ವಮಟ್ಟದಲ್ಲಿ ಬೇಡಿಕೆ ಇದ್ದರೂ ಸಹ ರಾಜ್ಯದಲ್ಲಿ ಹಿಪ್ಪು ನೇರಳೆ ಬೆಳೆ ಪ್ರದೇಶ ಮತ್ತು ಉದ್ಯಮ ವಿಸ್ತರಣೆಗೆ ಸಿಬ್ಬಂದಿಗಳ ಕೊರತೆಯಿಂದ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಬೀದರ್ ಜಿಲ್ಲೆಯ ರೈತರ ಜೀವನಾಡಿ BSSK ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡಿಸುವುದರ ಕುರಿತು

**ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) –**

೨೭ (೨೬೨) ಸಕ್ಕರೆ ಮತ್ತು ಜವಳಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯ ರೈತರ ಜೀವನಾಡಿ BSSK (ಬಿಎಸ್ಎಸ್ಕೆ) ಸಕ್ಕರೆ ಕಾರ್ಖಾನೆ ಪ್ರಾರಂಭಗಾಗಿದ್ದು ಯಾವಾಗ ;

(ಆ) ಕಾರ್ಖಾನೆಯು ಪ್ರಸ್ತುತ ಸ್ಥಗಿತಗೊಂಡಿರುವುದಕ್ಕೆ ಕಾರಣವೇನು ;

(ಇ) ಕಾರ್ಖಾನೆಯ ಮೇಲೆ ಇರುವ ಸಾಲ ಎಷ್ಟು ;

(ಈ) ಈ ಕಾರ್ಖಾನೆಯನ್ನು ಸರ್ಕಾರವು ಪುನರ್ ಆರಂಭಿಸಿ, ರೈತರಿಗೆ ಅನುಕೂಲವಾಗುವಂತೆ ಮಾಡಿಕೊಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ?

## ಕ್ರೈಸ್ತ ಸಮುದಾಯದವರಿಗೆ ನೀಡುತ್ತಿರುವ ಸೌಲಭ್ಯಗಳು

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೨೮ (೨೦೧) ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಹಾಗೂ ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಜನ ಸಂಖ್ಯೆ ಎಷ್ಟು ; ಈ ಸಮುದಾಯದವರಿಗೆ ಆರ್ಥಿಕ, ಶಿಕ್ಷಣ ಮತ್ತು ಅವರ ಮೂಲ ಕಸುಬುಗಳ ಬಗ್ಗೆ ಸರ್ಕಾರ ಅಂಕಿ ಅಂಶಗಳನ್ನು ತಯಾರಿಸಿದೆಯೇ ; ಈ ಬಗ್ಗೆ ಸರ್ಕಾರದ ಬಳಿ ಇರುವ ಅಂಕಿ ಅಂಶಗಳಾವುವು ; (ವಿವರ ನೀಡುವುದು)

(ಆ) ಕ್ರೈಸ್ತ ಸಮುದಾಯಕ್ಕೆ ಸರ್ಕಾರಿ ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೆಂಬ ಬಗ್ಗೆ ಸರ್ಕಾರದ ಬಳಿ ವರದಿ ಇದೆಯೇ; ಪ್ರಸ್ತುತ ೩ಬಿ ಮೀಸಲಾತಿ ಪಟ್ಟಿಯಲ್ಲಿದ್ದು, ಇತರ ಪ್ರಮುಖ ಸಮುದಾಯದ ಜೊತೆ ಪೈಪೋಟಿ ನಡೆಸಲು ಸಾಧ್ಯವಾಗದೇ ಇರುವುದರಿಂದ ಕ್ರೈಸ್ತ ಸಮುದಾಯದ ಇತರ ಮುಸ್ಲಿಂ ಅಲ್ಪಸಂಖ್ಯಾತರ (೨ಬಿ) ಸಮುದಾಯಕ್ಕೆ ನೀಡಿದಂತೆ, ಕ್ರೈಸ್ತ ಸಮುದಾಯಕ್ಕೂ ಜನಸಂಖ್ಯೆಯ ಆಧಾರದಲ್ಲಿ ಪ್ರತ್ಯೇಕ ಸಮೂಹ ಸೃಷ್ಟಿಸಬೇಕೆಂಬ ಬೇಡಿಕೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಇ) ೨೦೨೪-೨೫ನೇ ಸಾಲಿನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ರೂ. ೨೫೦ ಕೋಟಿ ಅನುದಾನ ನೀಡಿದ್ದು, ೨೦೨೫-೨೬ನೇ ಸಾಲಿನಲ್ಲಿ ಕೇವಲ ರೂ. ೮೫ ಕೋಟಿ ಅನುದಾನ ನೀಡುವುದರ ಮೂಲಕ ಕ್ರೈಸ್ತ ಸಮುದಾಯದ ಬೇಡಿಕೆ ಪೂರೈಸಲು ಅನುದಾನದ ಕೊರತೆಯಾಗಿದ್ದು, ಅನುದಾನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಈ) ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ಸ್ವಂತ ಕಟ್ಟಡ ಒದಗಿಸಿಕೊಡಲು ಸರ್ಕಾರವು ಇತರೆ ನಿಗಮಕ್ಕೆ ನೀಡಿದಂತೆ ಸರ್ಕಾರದ ವತಿಯಿಂದ ಸ್ಥಳ ಮತ್ತು ಕಟ್ಟಡ ನಿರ್ಮಾಣ ಮಾಡಲು ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಉ) ಕ್ರೈಸ್ತ ಸಮುದಾಯದವರು ಬೇರೆ ಸಮುದಾಯದಂತೆ ತಮ್ಮ ಪವಿತ್ರಯಾತ್ರಾ ಸ್ಥಳವಾದ ಜೆರೋಸಲಾಮ್‌ಗೆ ತೆರಳಲು ಸರ್ಕಾರದ ಮುಂದೆ ಇಡಲಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಸುಸಜ್ಜಿತವಾದ ಪಾರ್ಕ್ ಅನ್ನು ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೯ (೨೫೬) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿಂಧನೂರು ನಗರಕ್ಕೆ ಹೊಂದಿಕೊಂಡಂತೆ ಇರುವ ತೋಟಗಾರಿಕೆ ಇಲಾಖೆಯ ಕೋಟ್ಯಾಂತರ ರೂಪಾಯಿ ಬೆಳೆ ಬಾಳುವ ಸುಮಾರು ೨೨ ಎಕರೆ

೧೧ ಗುಂಟೆ ಜಾಗವು ಸರ್ಕಾರದಿಂದ ಇನ್ನೂ ಸರಿಯಾದ ರೀತಿಯಲ್ಲಿ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಜಾಗದಲ್ಲಿ ಸಿಂಧನೂರು ನಗರದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಿಶಾಲವಾದ ಮತ್ತು ಸುಸಜ್ಜಿತವಾದ ಪಾರ್ಕ್ ನಿರ್ಮಾಣ ಮಾಡುವ ಸಂಬಂಧ ರೂ.೮.೦೦ ಕೋಟಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಕೆಕೆಆರ್‌ಡಿಬಿಗೆ ಸಲ್ಲಿಸಲಾಗಿರುವುದಾಗಿ ಕಳೆದ ಬಜೆಟ್ ಅಧಿವೇಶನದಲ್ಲಿ ಮಾನ್ಯ ಸಚಿವರು ಉತ್ತರ ನೀಡಿದ್ದು, ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಸದರಿ ಸ್ಥಳದಲ್ಲಿ ಸುಸಜ್ಜಿತವಾದ ಪಾರ್ಕ್ ಅನ್ನು ನಿರ್ಮಾಣ ಮಾಡಿ ಸಾರ್ವಜನಿಕರ ಬಳಕೆಗಾಗಿ ಯಾವ ಕಾಲಮಿತಿಯೊಳಗೆ ಒದಗಿಸಲಾಗುವುದು?

## ಅಲ್ಪಸಂಖ್ಯಾತ ವಿದ್ಯಾರ್ಥಿ ವಸತಿ ನಿಲಯಗಳಲ್ಲಿನ ಮೂಲಸೌಕರ್ಯ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೦ (೨೩೭) ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಅಲ್ಪಸಂಖ್ಯಾತ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಕುಡಿಯುವ ನೀರು, ಶೌಚಾಲಯ, ಸ್ನಾನಗೃಹ, ವಿದ್ಯುತ್ ಹಾಗೂ ಸ್ವಚ್ಛತಾ ಸೌಲಭ್ಯಗಳು ಸಮರ್ಪಕವಾಗಿವೆಯೇ ; ಕೊರತೆಯಿರುವ ವಸತಿ ನಿಲಯಗಳ ಜಿಲ್ಲಾವಾರು ವಿವರ ನೀಡುವುದು ;

(ಆ) ವಸತಿ ನಿಲಯಗಳಲ್ಲಿ ಗ್ರಂಥಾಲಯ, ಕಂಪ್ಯೂಟರ್ ಕೊಠಡಿ, ಇಂಟರ್‌ನೆಟ್ ಸೌಲಭ್ಯ ಅಡುಗೆಮನೆ, ಊಟದ ಕೊಠಡಿ ಮತ್ತು ಆಹಾರ ಸಂಗ್ರಹ ಕೊಠಡಿಗಳನ್ನು ಕಲ್ಪಿಸಲು ಸರ್ಕಾರ ಯಾವ ಯೋಜನೆ ರೂಪಿಸಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಹಾಸಿಗೆ, ಹಾಸುಗೆಯ ಮೇಜು, ಕುರ್ಚಿ ಹಾಗೂ ಅಗತ್ಯ ಪೀಠೋಪಕರಣಗಳ ಖರೀದಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;

(ಈ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಒಂದು ಕೊಠಡಿಗೆ ವಿದ್ಯಾರ್ಥಿಗಳನ್ನು ಯಾವ ಮಾನದಂಡಗಳ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ ; ವಯಸ್ಸು, ತರಗತಿ, ಶಿಕ್ಷಣ ಸಂಖ್ಯೆ, ಲಿಂಗ, ಜಿಲ್ಲೆ ಅಥವಾ ಇತರೆ ಯಾವುದೇ ಮಾನದಂಡಗಳನ್ನು ಅನುಸರಿಸಲಾಗುತ್ತಿದೆಯೇ?

**ಜ್ಯೋತಿ**

ಕಾರ್ಯದರ್ಶಿ (ಪ್ರ)

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ ./ಪಿ7

**List of Questions for Oral Answers**

**Total No. of Questions - 15**

# LIST - 2

# KARNATAKA LEGISLATIVE COUNCIL

## ONE HUNDRED AND FIFTY NINTH SESSION

## Tuesday, the 18th August, 2026

---

**GROUP - II**

1. Minister for Housing.
2. Minister for Agriculture
3. Minister for Sugar and Textiles
4. Minister for Co-operation
5. Minister for Municipal Administration
6. Minister for Animal Husbandry and Sericulture
7. Minister for Minority Welfare, Haj and Wakf and Health and Family welfare
8. Minister for Mines and Geology and Horticulture

---

**ESTABLISHMENT OF AGRICULTURAL UNIVERSITY IN AGRICULTURAL AND HORTICULTURAL RESEARCH STATION, BRAHMAVARA**

**Sri Manjunatha Bhandari (Local Authorities Constituency)-**

16 (206) Will the Minister for Agriculture be pleased to state:-

a) the reasons for non implementation of establishment of the Agricultural University in Agricultural and Horticultural Research Station of Brahmavara which is coming under the limit of Keladi Shivappa Nayaka University of Agricultural and Horticultural Sciences till date, eventhough it has been intimated to the agriculture department in 2010 to take further action;

b) Although the proposed area for the establishment of agricultural university, Brahmavara has about 1,22,132 hectares of land and also the expert committee has recommended on 06/04/2024, the reasons for not establishment of the same till date;

c) the compliance measures taken by the department till date according to the directions given to the agriculture department to establish Agricultural University in Agricultural and Horticultural Research Station, Brahmavara in 2010 by the Government of Karnataka, the particulars of subjects for which the approval has been accorded and the grant that has been sanctioned;

d) whether the approval has been obtained by the Finance Department for this proposal; other measures that have been taken in this regard; the present stage of the proposal in the Government regarding implementation of the report that has been submitted and stated that the agricultural university would be established, if Rs.5/- crore of grant would be provided by the Keladi Shivappa Nayaka University of Agricultural and Horticultural Sciences;

e) the date on which an order has been issued to make Agricultural University, Brahmavara fully functional from the academic year 2027-28 in view of demand of the farmers of the said region as there is no Agricultural University anywhere nearby limits of Dakshina Kannada and Udupi districts?

**CO-OPERATIVE SOCITIES FUNCTIONING IN THE STATE**

**Sri Shivakumar K. (Nominated) -**

17 (220) Will the Minister for Co-operation be pleased to state:-

(a) the number of co-operative societies (including primary agriculture credit co-operative societies, urban souharda/town co-operative societies and district intermediary banks) that are functioning at present in the State; (divisionwise and districtwise complete details be furnished)

(b) the number of people to whom and the amount of loan that has been disbursed from various district

co-operative banks and societies of the State including Bengaluru District Central Co-operative (DCC) Bank during the last three years; (yearwise details be furnished)

(c) out of the disbursed loan, the number of beneficiaries who belongs to general category, other backward classes(OBC) and scheduled caste/scheduled tribes (SC/ST) who have been benefitted; (categorywise and yearwise details be furnished)

(d) the outstanding loan amount (outstanding and NPAs) that has been pending without recovered from general category, other backward classes, scheduled caste, scheduled tribes by the various co-operative societies and district banks at present? (categorywise complete details be furnished)

**TRESPASS OF PROPERTY**

**Sri Raghu R. (Elected by Legislative Assembly) -**

18 (242) Will the Minister for Municipal Administration be pleased to state:-

(a) whether it has come to the notice of the Government that the issue of trespass of the properties which are coming under the limits of City Municipal Councils, Town Municipal Councils and Town Panchayats in the State; (information be furnished)

(b) the extent of property that has been forfeited in city municipal councils, town municipal councils and town panchayts in the State so far; the number of cases which have been pending; (districtwise information be furnished)

(c) the steps taken by the Government to prevent the trespass of footpaths and control the menace of advertisements in the said limits? (complete information be furnished)

## CONSTRUCTION OF FARM PONDS IN THE STATE

**Sri H.S. Gopinath (Local Authorities Constituency) -**

19 (271) Will the Minister for Agriculture be pleased to state:-

(a) the total number of farm ponds that have been constructed in the State during the last 3 years; (districtwise and talukwise information be furnished)

(b) the amount of subsidy that has been provided by the Government for the construction of farm pond; the separate subsidy rate for general category, SC/ST and other categories; (details be furnished)

(c) the total number of beneficiaries who have been benefitted under this scheme; (talukwise and categorywise details be furnished)

(d) the number of cases of applications yet to be pending to release the grant; the total outstanding amount thereof; the steps taken by the Government to release the outstanding grants? (details be furnished)

## IRREGULARITIES IN THE SHANTHINAGAR HOUSING CO-OPERATIVE SOCIETY

**Sri Sharavana T.A. (Elected by Legislative Assembly) -**

20 (227) Will the Minister for Co-operation be pleased to state:-

(a) whether it has come to the notice of the Government that the land that has been granted for the benefit of scheduled caste, minorities and scheduled tribes has been registered illegally to shantinagar housing co-operative society; if so, whether the said land has been withdrawn by the Government; if not, the timelimit within which the land would be withdrawn;

(b) the particulars of nature of irregularities that have been occurred in the Langford road housing co-operative society; particular of officials who assisted in this and the action taken against them;

(c) the total number of sites that have been formed by the said society; the number of sites that have been allotted and the number of sites that are remaining for allotment? (the copy of the allotment list of sites be furnished)

## REGARDING GOSHALAS OF THE STATE

**Sri Kishor Kumar Puttur (Local Authorities Constituency) -**

21 (233) Will the Minister for Animal Husbandry and Sericulture be pleased to state:-

(a) the number of Goshalas that are functioning at present in the State; the capacity of the same; (districtwise details be furnished)

(b) the grant and the facilities that are being provided by the Government for Goshalas during the last three years; the number of posts that have been sanctioned, filled up and lying vacant for the maintenance of Goshalas; (districtwise complete information be furnished)

(c) whether the Government has any scheme to establish more number of new Goshalas for the caretaking of rescued abandoned cows and cattle in need of protection in the State; the number of Goshalas which are under construction stage at present;

(d) whether the Government has considered to providing special scheme or additional grant with regard to providing land, water, electricity, fodder, veterinary service, staff and required basic facilities for Goshalas; if so, the details thereof;

(e) whether it has come to the notice of the Government that various cases are being reported in various regions of the Sate regarding illegal transportation of cattle, cow theft and cow slaughter eventhough the Karnataka Prevention of Slaughter and Preservation of Cattle Act is being implemented in the State; the particulars of measures taken by the Government for prevention of the said illegal activities;

(f) whether there is co-ordination between the Police Department, Department of Animal Husbandry and concerned officers?

## WAIVE OFF AGRICULTURE LOANS PROVIDED TO FARMERS IN THE STATE

**Sri K.S. Naveen (Local Authorities Constituency) -**

22 (275) Will the Minister for Co-operation be pleased to state:-

(a) the total amount of loan that has been provided to farmers of the State by the Primary Agricultural Co-Operative Societies (PACS), District Central Co-Operative banks (DCC banks) and various Co-operative societies which are coming under the limits of the co-operation department during the last three years; (yearwise details be furnished)

(b) out of which, the amount of loan that has been provided to small farmers (those who have obtained the loan upto Rs.1 lakh) for various agriculture activities; (yearwise details be furnished)

(c) whether any proposal is before the Government to waive off the agriculture loan that has been availed by the farmers through the co-operation department/societies in view of the current drought situation in the State; if so, the steps taken by the Government in this regard;

(d) the total amount of agriculture loan that has been provided to farmers by the Co-operation department in the State? (districtwise details be furnished)

## TOTAL HOUSING CO-OPERATIVE SOCIETIES IN BENGALURU

**Sri Ramojigowda (Graduates' Constituency) -**

23 (217) Will the Minister for Co-operation be pleased to state:-

(a) the total number of housing co-operative societies in Bengaluru; (the details alongwith name and address be furnished)

(b) the number of years from which these co-operative societies are functioning; (details be furnished)

(c) the extent of land that has been purchased by these co-operative societies for the allocation of site; the details of the investment for the same; (complete details be furnished)

(d) the number of site holders to whom site has been allotted by these co-operative societies; (the details alongwith name, address and dimension of site be furnished)

(e) whether it has come to the notice of the Government that these societies are cheating for years without allocating site to site holders; if so, the steps taken by the Government; (details be furnished)

(f) whether the action has been taken under the Real Estate Regulation and Development (RERA) Act with regard to irregularity of crores of rupees by these co-operative societies without allocating sites to their members?

## AGRICULTURE LOAN OBTAINED BY THE FARMERS IN KARNATAKA

**Sri Madhu G. Madegowda (Graduates' Constituency) -**

24 (247) Will the Minister for Co-operation be pleased to state:-

(a) the total amount of agriculture (crop) loan that has been obtained by the farmers in the State;

(b) the particulars of districts of farmers who have received the highest and lowest amount of loan; (districtwise details of the number of farmers and total amount of loan has been obtained be furnished)

(c) the number of farmers who have obtained the crop loans and term loan (short term, medium term and long term) in the State and total amount of the same; (detailed information be furnished)

(d) whether it is true that there is a decline in loan recovery; if so, the reasons for the same; the quantum of the same; (complete details along with percentagewise information be furnished)

(e) the quantum of prevailing interest rate and subsidy amount for agriculture crop loan? ( details be furnished)

## RECRUITMENT OF VACANT POSTS DUE TO RETIREMENT

**Sri S.V. Sankanur (Graduates' Constituency) -**

25 (216) Will the Minister for Agriculture be pleased to state:-

(a) the number of teaching and non-teaching posts that have been sanctioned to the University of Agricultural Sciences, Dharwad; out of which, the number of posts working and lying vacant; (caderwise information be furnished)

(b) whether the Government has intended to fill up the teaching- non teaching posts which are lying vacant during the year 2026-2027; (if so, information be furnished)

(c) whether it has come to the notice of the Government that the "college of community science" building in University of Agricultural Sciences, Dharwad (Home science college) has become completely dilapidated condition and thereby causing hindrance to the academic and research activities;

(d) if so, whether the steps would be taken by the Government to construct the separate new building for the said college; whether the work of preparing the

blueprint and estimation in this regard has been commenced? (complete information be furnished)

**SANCTIONED POSTS TO THE DEPARTMENT OF SERICULTURE**

**Sri T.N. Javarayi Gowda (Elected by Legislative Assembly) -**

26 (176) Will the Minister for Animal Husbandry and Sericulture be pleased to state:-

(a) the total number of posts that have been sanctioned to department of sericulture; the number of posts which are lying vacant; (postwise information be furnished)

(b) the information of officers/staff technical staff who are working in various offices of these districts including Ramanagar, Chikkaballapura, Kolar and Tumakuru which are major silk growing districts be furnished; also, the number of posts which are lying vacant in these districts;

(c) whether it has come to the notice of the Government that there is a shortage of staff for the extention of mulberry crop and industry in the State eventhough there is a demand for the Mysuru silk of the State at global level;

(d) if so, the steps taken by the Government? (details be furnished)

**RECOMMENCEMENT OF BSSK SUGAR FACTORY**

**Dr. Chandrashekara Basavaraja Patil (Graduates' Constituency) -**

27 (262) Will Minister for Sugar and Textiles for be pleased to state:-

(a) the date on which BSSK sugar factory, which is the lifeline of the farmers of Bidar district has been commenced;

(b) the reason for shutdown of the factory at present;

(c) the details of the loan on the factory;

(d) whether there is an intention before the Government for the recommencement of the this factory and facilitate to farmers?

## FACILITIES FOR CHRISTIAN COMMUNITY

**Sri Ivan D'Souza (Elected by Legislative Assembly) -**

28 (201) Will the Minister for Minority Welfare, Haj and Wakf and Health and Family welfare be pleased to state:-

(a) the population of Christian community in the State; whether the Government has collected the statistics regarding economic, educational and basic occupation status of this community; the particulars of statistics that are available with the Government in this regard; (details be furnished)

(b) whether there is a report in the Government about the Christian community is unable to get reservation facilities in the Government employment and education; since this community is currently in the 3B reservation list and difficulties are faced by this community in competing with other major community, the steps taken by the Government regarding the demand for a separate group based on the population for Christian community as given to muslim minorities (2B) community; (details be furnished)

(c) Rs.250/- crore grant has been provided for the Christian development corporation in the year 2025-26, but only Rs.85/- crore has been given as grant in the year 2026-27 thus, there is a shortage of grant to fulfill the demand of Christian community, the steps taken by the Government to increase the grant; (details be furnished)

(d) the measure taken by the Government to provide the land and construction of building for the Christian

Development Corporation as being provided for other corporation; (details be furnished)

(e) the proposal of Christian community to visit Jerusalem their holy place, like other community is before the Government, the steps taken by the Government in this regard? (details be furnished)

**CONSTRUCTION OF WELL EQUIPPED PARK**

**Sri Basanagouda Badarli (Elected by Legislative Assembly)-**

29 (256) Will the Minister for Mines and Geology and Horticulture be pleased to state:-

(a) whether it has come to the notice of the Government that approximately 22 acre 11 gunta of land worth crores of rupees belongs to the Horticulture Department which is located adjacent to Sidhanur city has not yet utilized properly by the Government;

(b) if so, the reply has been given by the Hon'ble Minister in the last budget session stating that the same has been submitted to KKRDB by preparing action plan of Rs.8.00 crores regarding construction of wide and well equipped park facilitating to public of Sindhanur city in the said land, the present stage of the same;

(c) the timelimit within which the park would be provided for public use by constructing well equipped park in the said place?

**BASIC FACILITIES IN MINORITY HOSTELS**

**Sri K. Abdul Jabbar (Elected by Legislative Assembly) -**

30 (237) Will the Minister for Minority Welfare, Haj and Wakf and Health and Family welfare be pleased to state:-

(a) whether drinking water, toilets, bathrooms, electricity and sanitation facilities are available adequately in the minority hostels of the State; the districtwise details of shortage of hostels be furnished;

(b) the particular of plan that has been chalkedout by the Government to provide the library, computer room, internet facility, kitchen, dining hall and food storage rooms in the hostels;

(c) the grant that has been released for purchasing of beds, bed tables, chairs and essential furnitures in the hostels during the last three years;

(d) the criterias based on which the students are being allocated to a room in the hostels of the minorities welfare department; whether any criteria such as age, class, educational institution, gender, district or other are being complied for such allotment?

**JYOTHI**
Secretary (I/c)
Karnataka Legislative Council

Government Press, Vikasa Soudha Unit, Bengaluru - WD -251, - Copies